

ಮಾಂಸಾಹಾರಿ ಸ್ಯಾಂಡ್‌ವಿಚ್‌ಗಳು



ಚಿತ್ರಕಲೆಯಲ್ಲಿ ವೈನು

ಗೃಹಿಣಿ ತನ್ನ ಬಿಡುವಿನ ಹೊತ್ತಲ್ಲಿ ದೋಸೆಹಿಟ್ಟು ಮಾಡಿ ಭಾರತೀಯ ಕುಟುಂಬಗಳಿಗೆ ಮಾರಲು ಹೋಗಿ ಸರ್ಕಾರದಿಂದ ದಂಡ ಹಾಕಿಸಿಕೊಂಡ ಕತೆ; ಬಿರಿಯಾನಿ ಮಾಡುವಾಗ ಫ್ಲಾಟಿನ ಕಟ್ಟಿಗೆಯ ನೆಲಹಾಸನ್ನು ಸುಟ್ಟ ಭಾರತೀಯ ಬ್ರಹ್ಮಚಾರಿಗಳ ಕತೆ – ಇತ್ಯಾದಿ.

ಇಲ್ಲಿ ಜನ ಉಣ್ಣುವ ರೀತಿಯೂ ವಿಶಿಷ್ಟ. ಕಚೇರಿಗೆ ಹೋಗಿಬರುವಾಗ ರೈಲುನಿಲ್ದಾಣ, ಬಸ್ಸುನಿಲ್ದಾಣಗಳಲ್ಲಿರುವ ಬೇಕರಿಗಳಿಂದ ಪ್ಯಾಕುಮಾಡಿಕೊಂಡು ನಡೆಯುತ್ತಲೇ, ಪಯಣಿಸುತ್ತಲೇ ತಿಂದು ಮುಗಿಸುವರು. ಅವಸರವಿಲ್ಲದಾಗ ಬೀದಿಬದಿ ಹೋಟೆಲಿನ ಕುರ್ಚಿಯಲ್ಲಿ ಕೂತು ಚೂರುಚೂರೇ ತಿನ್ನುತ್ತ, ತುಸುವೇ ಕುಡಿಯುತ್ತ ಗಂಟೆಗಟ್ಟಲೆ ವಿರಾಮ ಸವಿಯುವರು. ಜನಸಾಗರ ಪಕ್ಕದಲ್ಲಿ ಹರಿದಾಡುತ್ತಿದ್ದರೂ ಪರಿವೆಯಿಲ್ಲ. ವೈನು ಬೀರು ಇದ್ದರಂತೂ ಊಟ ನೆಪ, ಮಾತೂ ಮಾತು. ಇಲ್ಲಿನ ರೆಸ್ಟೊರೆಂಟು ಬೇಕರಿಗಳಲ್ಲಿ ಮದ್ಯ ಸಿಗುತ್ತದೆ. ಪಾನಕ್ಕೆ ಇಲ್ಲಿನ ಚಳಿಯ ಕುಮ್ಮಕ್ಕೂ ಇದೆಯಷ್ಟೆ. ಇಲ್ಲಿ ಕುಡಿತ ಚಟವಾಗಿರದೆ ಆಹಾರದ ಭಾಗವಾಗಿದೆ. ಎಲ್ಲೂ ಕುಡಿದು ಬೀದಿಯಲ್ಲಿ ತೂರಾಡುವವರು ಕಾಣಲಿಲ್ಲ. ‘ಮದ್ಯವನ್ನು ಎಳೆಯಮಕ್ಕಳಿಗೆ ಮಾರಬಾರದು; ಸಾರ್ವಜನಿಕ ಸ್ಥಳಗಳಲ್ಲಿ ಕುಡಿದರೆ ದಂಡ’ದ ಬೋರ್ಡುಗಳಿವೆ. ಆದರೆ ಅವುಗಳ ಪಾಲನೆ ಬಗ್ಗೆ ನನಗೆ ಸಂಶಯ. ರೈಲು ಬಸ್ಸು ಟ್ರಾಮುಗಳಲ್ಲಿ, ಬಾಟಲಿ ಕ್ಯಾನು ಹಿಡಿದು ಕುಡಿಯುತ್ತ ತರುಣ–ತರುಣಿಯರು ಮಸ್ತಿ ಮಾಡುತ್ತಿದ್ದರು. ರೋಂ ವಿಶ್ವವಿದ್ಯಾಲಯದ ಕ್ಯಾಂಟೀನಂತೂ ಗ್ರಂಥಾಲಯದಲ್ಲಿ ಪುಸ್ತಕಗಳಿರುವಂತೆ ಸೀಸೆಗಳಿಂದ ಅಲಂಕೃತವಾಗಿತ್ತು. ವೆನಿಸಿನಲ್ಲಿ ದೋಣಿಗಳಲ್ಲಿ ಪೀಪಾಯಿಯಲ್ಲಿ ತಾಜಾ ಬೀರು–ವೈನನ್ನು ವರ್ತನೆಗೆ ಹಾಲುಹಾಕುವಂತೆ ಕೊಲ್ಲಿಬದಿಯ ಹೋಟೆಲುಗಳಿಗೆ ತಂದಿಳಿಸುವುದನ್ನು ನೋಡಿದೆವು. ಅಲ್ಲಿನ ಕುಡಿತದ ಪ್ರಮಾಣದ ಅಂದಾಜು ಮಾಡಬೇಕಾದರೆ, ಬೀದಿತುದಿಯ ಕಸದ ತೊಟ್ಟಿಗಳನ್ನು ನೋಡಬೇಕು. ನೂರಾರು ಲೇಬಲ್ಲುಳ್ಳ ಬಣ್ಣಬಣ್ಣದ ಬಾಟಲು, ಯುದ್ಧಭೂಮಿಯ ಸೈನಿಕರ ದೇಹಗಳಂತೆ ಚೆಲ್ಲಾಪಿಲ್ಲಿ ಬಿದ್ದಿರುತ್ತವೆ. ಬಾಟಲುಗಳಿದ್ದ ಪೆಟ್ಟಿಗೆ ಇತರೆ ಕಸದ ಪೆಟ್ಟಿಗೆಗಿಂತ ಹೆಚ್ಚು ತುಂಬಿ ತುಳುಕುತ್ತಿರುತ್ತದೆ. ನಾವಿದ್ದ ಬೀದಿಯಲ್ಲಿ ಒಬ್ಬ ಮುದುಕಿ ಬ್ಯಾಗಿನಲ್ಲಿ ಹತ್ತಾರು ಶೀಸೆ ತಂದು ಬಾಂಬು ಹಾಕಿದಂತೆ ಢಮಾರ್ ಶಬ್ದ ಮಾಡುತ್ತ ಹಾಕಿತು. ನಾನು ‘ಈ ಸಣಕಲು ಎಷ್ಟೊಂದು ಕುಡಿದಿದೆಯಾ?’ ಎಂದೆ. ‘ಇಲ್ಲಿಲ್ಲ. ಇಡೀ ಕುಟುಂಬವೇ ಕುಡಿದಿರುತ್ತದೆ. ಒಂದು ವಾರದ್ದು ಒಮ್ಮೆ ತಂದು ಹಾಕುತ್ತಿರಬೇಕು’ ಎಂದು ದೀಪು ವಿವರಣೆ ನೀಡಿದರು.

ಜರ್ಮನಿಯಲ್ಲಿ ಮದ್ಯೋತ್ಪಾದನೆಗೆ ಪ್ರಸಿದ್ಧವಾದ ಕಂಪನಿಗಳಿವೆ. ಮಾಲುಗಳಲ್ಲಿ ಹೊಳೆವ ಶೀಸೆಗಳಲ್ಲಿ ವಿವಿಧ ಬ್ರಾಂಡುಗಳ ಮದ್ಯ ವಿಭಾಗ ಝಗಝಗಿಸುತ್ತಿರುತ್ತದೆ. ಕಂಪನಿಗಳು ತಮ್ಮ ಹಳತನ್ನು ಲೇಬಲ್ಲುಗಳ ಮೇಲೆ